
# ಕಾನನ

ಪ್ರಯೋಗಿಕ ಸಂಚಿಕೆ

ಇ-ಮಾಸಿಕ ಮಾರ್ಚ್ 2011



WCG

WILDLIFE CONSERVATION GROUP



# ಕಾನನ

ಇ-ಮಾಸಿಕ ಪ್ರಯೋಗಿಕ ಸಂಚಿಕೆ

## ಲೇಖನಗಳು

* ಹಕ್ಕಿಲೋಕ - ನಾಗೇಶ್.ಓ.ಎಸ್
* ಹುಲಿಗಳ ಹಾದಿಯಲ್ಲಿ ಸೋಲಿಗ - ಅಶ್ವಥ.ಕೆ.ಎನ್
* ಕಾಡೆಮ್ಮೆ ಬೇಟೆ - ಶಂಕರಪ್ಪ.ಕೆ.ಪಿ
* ನಾನೊಂದು ಕನಸಕಂಡೆ - ಲಕ್ಷ್ಮೀಕಾಂತ್.ಎಸ್.ಬಿ

ಅನಿಸಿಕೆಗೆ
E-mail: kaanana.mag@gmail.com

**ಮುಖಪುಟ :** ಬಿಳಿಗಿರಿರಂಗನ ಬೆಟ್ಟದ ಕಾಡು.




# ಸಂಪಾದಕೀಯ

ಪ್ರೀತಿಯ ಓದುಗರೇ. . . .

ಈ ಸಂಚಿಕೆಯಲ್ಲಿ “ಹುಲಿಗಳ ಹಾದಿಯಲ್ಲಿ ಸೋಲಿಗ.” ಎಂಬ ಲೇಖನವನ್ನು ಪ್ರಕಟಿಸಲಾಗಿದೆ, ಸೋಲಿಗರ ಹಿತರಕ್ಷಣೆಯೋ ? ಹುಲಿಗಳ ಸಂರಕ್ಷಣೆಯೋ ? ಎಂಬ ವಿಷಯ ಇತ್ತೀಚಿನ ದಿನಗಳಲ್ಲಿ ಪರ-ವಿರೋಧಗಳ ಕುರಿತು ಚರ್ಚೆಗಳು ನಡೆಯುತ್ತಿವೆ, ಬಿಳಿಗಿರಿರಂಗನ ಬೆಟ್ಟದ ಅರಣ್ಯಪ್ರದೇಶವನ್ನು ಹುಲಿ ಸಂರಕ್ಷತಾರಣ್ಯವೆಂದು ಘೋಷಿತವಾದದ್ದು ತಮ್ಮಗೆಲ್ಲ ಗೊತ್ತಿರುವ ವಿಚಾರವೇ. . .ಆದರೆ ಇಲ್ಲಿ ಹುಲಿ ಸಂರಕ್ಷಣೆಗೆ ಅಗುವ ತೊಂದರೆಗಳು ಕಡಿಮೆಯೇನಲ್ಲ, ಹಲವಾರು ಬುಡಕಟ್ಟು ಜನಾಂಗಗಳು ಇಲ್ಲಿ ವಾಸವಾಗಿವೆ, ಅವು ನೇರವಾಗಿ ಅಲ್ಲದಿದ್ದರು ಪರೋಕ್ಷವಾಗಿ ಹುಲಿ ಸಾಮ್ರಾಜ್ಯದ ಮೇಲೆ ಪ್ರಭಾವ ಬೀರುತ್ತವೆ. ಮತ್ತೊಂದು, ಮನುಷ್ಯ ಭೂಮಿಯ ಮೇಲೆ ನಾಗರೀಕತೆ ವಿಶ್ವವ್ಯಾಪಿಯಾಗುತ್ತ ಬಂದಾಗ ನಿಸರ್ಗದ ಸಂಪನ್ಮೂಲಗಳ ಬಳಕೆಯ ಪ್ರಮಾಣ ಹೆಚ್ಚುತ್ತಾ ಬಂದಹಾಗೆಲ್ಲ, ಕಾಡು ಪ್ರಾಣಿಗಳ ಮೇಲೆ ವ್ಯತಿರಿಕ್ತವಾಗಿ ಪರಿಣಾಮವಾಗತೊಡಗಿದೆ ಎಂಬುದು ತಮಗೆಲ್ಲ ಗೊತ್ತು. ಹುಲಿ ಸಂರಕ್ಷಣೆಯ ಬಗ್ಗೆ ಸೋಲಿಗ ಎಂಬ ‘ಹಸಿದ ಹೊಟ್ಟೆ’ಗಳಿಗೆ ಕಾಳಜಿ, ಕನಿಕರ ಎಲ್ಲಿಂದ ಬರಬೇಕು? ಎಂಬುದನ್ನು “ಹುಲಿಗಳ ಹಾದಿಯಲ್ಲಿ ಸೋಲಿಗ.” ಎಂಬ ಲೇಖನದಲ್ಲಿ ಬಣ್ಣಿಸಲಾಗಿದೆ.

ಅದೇ ರೀತಿ ಈ ಸಂಚಿಕೆಯಲ್ಲಿ ಕೆ.ಪಿ.ಶಂಕರಪ್ಪರವರು ಬರೆದಿರುವ “ಕಾಡೆಮ್ಮೆ ಬೇಟೆ” ಸಣ್ಣಕತೆಯು ತುಂಬ ವೈವಿಧ್ಯತೆಯಿಂದ ಮೂಡಿಸಿದ್ದಾರೆ. ಹದಿನಾಲ್ಕು ಹಳ್ಳಿಜನಗಳು ಪಾರೆಸ್ಟ್ರುಗಳಿಗೆ ಹೆದರಿ ಬೇಟೆಯನ್ನು ನಿಲ್ಲಿಸಿ ಹಲವು ವರ್ಷಗಳೇ ಕಳೆದಿದ್ದರು ಸಹ, ಈ ಸೊಳ್ಳೆಪುರದ ಜನ ಮಾತ್ರ ಚಾಟರ ಬಿಲ್ಲು, ತಂತಿ ಹುರುಳು, ಕಲ್ಲುಹುರುಳು, ಇಲಿಬೇಟೆ, ಉಡಬೇಟೆ, ಹೀಗೆ ಹಲವಾರು ಶಬ್ಧರಹಿತ ಸಾಕ್ಷಿ-ಕುರುಹುರಹಿತವಾಗಿ ಕಾಡು ಸೋಸುವ ಕಾರ್ಯ ನಿರಾಳವಾಗಿ ನೆಡೆಸುತ್ತಿದ್ದವರಲ್ಲಿ ಸೊಳ್ಳೆಪುರದ ಭೂಪ ಮಾದೇವ ಒಬ್ಬ. ಕಡವೆಯೋ? ಕಾಡೆಮ್ಮೆಯೋ? ಇರಬೇಕು ಎಂಬ ಸಂಶಯದಿಂದ ಪೊದರಿನಿಂದ ತಲೆ ಕಾಣಿಸಿದ್ದೇ ತಡ ಇಕ್ಕಡಿಸಿ ಬಿಟ್ಟ! ಆದ ಅನಹುತ ನೋಡಿ. .! ಅದು ಕೊರಮರದೊಡ್ಡ ಈರಿಯ ಕಾಡುದನ. ಅದನ್ನು ನೋಡಿ ಮಾದೇವನಿಗೆ ಮೈಯೆಲ್ಲಾ ತಣ್ಣಗಾಗಿದ್ದು. . ನ್ಯಾಯ . . ದಂಡ. . ಎಲ್ಲಾವನ್ನು ಕಣ್ಮುದೆ ಚಿತ್ರಮೂಡಿಸುವಂತೆ ಚಿತ್ರಿಸಿದ್ದಾರೆ.

ಪ್ರಕೃತಿಯ ಬಗ್ಗೆ ಅರಿವು ಮೂಡಿಸುವ ನಮ್ಮ ಪುಟ್ಟ ಪತ್ರಿಕೆಯನ್ನು ಓದಿ ಸಲಹೆ ಸೂಚನೆಯನ್ನು ನಿಮ್ಮಿಂದ ಆಶಿಸುತ್ತೇವೆ. ಮತ್ತು ಈ ಪತ್ರಿಕೆಯು ನಿಮಗಾಗಿಯೇ ಇದೆ, ವನ್ಯಲೋಕ, ಕಾಡು, ಪ್ರಾಣಿ-ಪಕ್ಷಿಗಳು, ಮತ್ತು ಸಾಹಿತ್ಯ ವಿಚಾರಗಳು, ಕವನ, ಕಥೆಗಳು, ವಿಜ್ಞಾನ, ಪ್ರವಾಸ, ಛಾಯಚಿತ್ರಗಳು ಮುಂತಾದ ವಿಷಯಗಳನ್ನು ಲೇಖನಗಳ ಮೂಲಕ ಈ ಜಗತ್ತಿಗೆ ಸಾದರಪಡಿಸಬಹುದು. ಲೇಖನಗಳನ್ನು ಕಳುಹಿಸಬಹುದಾದ ಇ-ಮೇಲ್ ವಿಳಾಸ : kaanana.mag@gmail.com ಗೆ ಕಳುಹಿಸಿ.




# ಹಕ್ಕಿಲೋಕ

## * ಮುದ್ದೆಗೌಡನ ಹಕ್ಕಿಮರಿ

ಶನಿವಾರ ಮಾರ್ನಿಂಗ್ ಇಸ್ಕುಲಿಗೆ ಬೆಳಿಗ್ಗೆ ಊಟ ಮಾಡದೆ ನೀಲಿ ಚಡ್ಡಿದರಿಸಿ ಬಂದಿದ್ದ ಶಾಲೆಯ ಬಾಲ ಮುದ್ದೆಗೌಡ.

ಅಣಾ ನಾನಿವತ್ತು ಎರಡುತಲೆ ಹಕ್ಕಿ ನೊಡ್ದೆ  ಕಣಣ್ಣಾ!



ನಿನ್ ತಲೆ!

ನಿಜ್ವಾಗ್ಲೂ ಅಣಾ... ... ಬೆಟ್ಟಿಂಗಾ . . .? ಬೇಕಾದ್ರೇ ಬಾ. . . ಇವಾಗ್ಲೆ ಮನೆಗೊಗೊ ದಾರಿಲೇ ತೊರ್ಸ್ತಿನಿ ಎಂದ.

ಕಳೆದ ವಾರ ಇವನೆ ನನಗೆ ಮೊಳದುದ್ದ ಬಾಲವಿರುವ ಹಾಗು ಸಿಲೋನ್‌ನಿಂದ ನಮ್ಮೂರಿಗೆ ವಲಸೆ ಬರುವ ಬಾಲದಂಡೆ ಹಕ್ಕಿ ತೊರಿಸಿದವನು. ಕೆಲಸವಿಲ್ಲದೆ ಅಂಡಲೆಯುವ ನನಗೆ ಎರಡುತಲೆ ಹಕ್ಕಿ ಸಿಕ್ಕಿರುವಾಗ ಸುಮ್ಮನಿರಲಾಗುವುದೆ? ಮುದ್ದೆಯ ಜೊತೆ ನಮ್ಮೂರಿನ ಕೆಂಪು ಬಸ್ಸಿನ ಎಂಬ್ಲಮ್ ನಲ್ಲಿರುವ ಎರಡು ತಲೆ ಹಕ್ಕಿಯ ಬಗ್ಗೆ ಮಾತಾಡುತ್ತಾ ದಾರಿಯಲ್ಲಿ ಸಾಗುವಾಗ ಹೊಲದ ಬದುವಿನ ಮೇಲೆ ಕುಳಿತ ಎರಡುಕೊಕ್ಕಿನ ಹಕ್ಕಿಯನ್ನು ತೋರಿಸಿ ಅಗೊ ಅಗೊ.. 'ಎರಡುತಲೆ ಹಕ್ಕಿ' ಎಂದ.

ಆದರೆ ಇದಕ್ಕೆ ಇವನೇಳಿದಂತೆ ಎರಡು ತಲೆಯಿರಲಿಲ್ಲ, ಒಂದೇ ತಲೆಯಲ್ಲಿ ಪಿಕಾಸಿಯಂತೆ ಎರಡು ಕೊಕ್ಕುಗಳು ಅಸ್ಪಷ್ಟವಾಗಿ ಕಂಡವು. ಪಿಕಾಸಿಯ ಮೊನೆಯಂತ ಒಂದು ಕೊಕ್ಕಿನಿಂದ  ನೆಲವನ್ನು ಕುಟುಕುತ್ತಿರುವಾಗ ಮತ್ತೊಂದು ಕೊಕ್ಕು ಆಕಾಶ ನೋಡುತ್ತಿತ್ತು. ಸಗಣಿ ತಪ್ಪೆಯಲ್ಲಿದ್ದ ಸಣ್ಣ ಹುಳುಗಳನ್ನೋ ಲಾರ್ವಗಳನ್ನೋ ತಿನ್ನುತ್ತಿತ್ತು. ಸದ್ದು ಮಾಡದೆ ಇನ್ನು ಸ್ವಲ್ಪ ಹತ್ತಿರ ಹೊದಾಗ ಪುರ್ರನೆ ಹಾರಿ ಪಕ್ಕದ ಮುಳ್ಳು ಬೂರುಗಮರದ ಮೇಲೆ ಕುಳಿತುಕೊಳ್ಳುವಾಗ ಅದರ ಆಕಾಶ ನೋಡುತ್ತಿದ್ದ ಕೊಕ್ಕು, ಜಪಾನಿ ಮಹಿಳೆಯರ ಮಡಚು ಬೀಸಣಿಗೆ ರೀತಿ ಬಿಚ್ಚಿಕೊಂಡ ಬಗೆ, ನಮ್ಮನ್ನೇ ಬೆಚ್ಚಿ ಬೀಳಿಸಿತು!

ತಲೆಯ ಮೇಲೆ ಜುಟ್ಟಿನಲ್ಲಿ ಚೂಪಾಗಿದ್ದ ಪುಕ್ಕಗಳ ಕೊಕ್ಕನ್ನು ನೋಡೇ, ಮುದ್ದೇ ಎರಡುತಲೆ ಹಕ್ಕಿ ಎಂದು ಮೋಸಹೋಗಿದ್ದು.
ಮತ್ತೆ ಈ ಹಕ್ಕಿಯನ್ನು ರಾಗಿಹಳ್ಳಿ ಸ್ಟೇಟ್ ಫಾರೆಷ್ಟನ ಸುತ್ತ ಮುತ್ತಾ, ಊರಿನ ಹೊಲ ಬಯಲಿನಲ್ಲಿ, ಕುರುಚಲುಕಾಡು ಗುಡ್ಡಗಳಲ್ಲಿ, ಕೆರೆ ಕುಂಟೆಗಳ ಮತ್ತು ಸಣ್ಣ ಸಣ್ಣ ಗುಂಪುಮರಗಳ ಬಳಿ ಕಂಡೆನಾದರೂ ಅದರ ಗೂಡು ಕಂಡಿದ್ದು ಮೂರೇ ಬಾರಿ. ಪಿಳ್ಳಪ್ಪನ ಪಾಳು ಮನೆಯ ಸೂರಿನಲ್ಲಿ ಮರದ ತರಾಯಿಯನ್ನು ಕೊರೆದು ಗೂಡು ಮಾಡಿತ್ತು. ಸುದ್ದಳ್ಳಾ ಲೇಕ್ ರಿಸರ್ವ್ ಪಾರೆಷ್ಟಿನ ಬಾಳೇಕೆರೆಯ ಬಳಿ ಒಣಗಿ ನಿಂತಿದ್ದ ಅತ್ತಿಮರದಲ್ಲಿ. ನೆಲದಿಂದ ಸುಮಾರು 20 ಅಡಿ ಎತ್ತರದಲ್ಲಿ ಗೂಡು ಕಟ್ಟಿತ್ತು.

ಕಂಠಪ್ಪನಕೆರೆಯ ಬಳಿಯ ಹಾವುಬಂಡೆ ಸಾಲಿನಲ್ಲಿ ಆಳೇತ್ತರದ ಕಲ್ಲುಸಂದಿಯಲ್ಲಿ ದಿನಕ್ಕೊಂದಂತೆ 6 ಮೊಟ್ಟೆ ಇಟ್ಟು, ಮೊದಲನೇ ಮೊಟ್ಟೆ ಇಟ್ಟ ದಿನದಿಂದಲೇ ತಾಯಿ ಹಕ್ಕಿ ಕಾವು ಕೊಡಲು ಶುರು ಮಾಡಿದ್ದರಿಂದ, 16 ದಿನದ ನಂತರ ದಿನಕ್ಕೊಂದಂರಂತೆ 6 ಮರಿ ಬಂದವು.


ಗಂಡು ಮತ್ತು ಹೆಣ್ಣು ಹಕ್ಕಿ ಎರಡೂ ಸೇರಿ ನಿರಂತರವಾಗಿ ಆ ಬಕಾಸುರ ಮರಿಗಳಿಗೆ ಕುಟುಕು ತಿನ್ನಿಸುವ ಪರಿ ಹಾಗು ಅವು ತಿನ್ನುವ ವಿಧಾನವೇ ವಿಸ್ಮಯ!




ನಾವು ರೇಷನ್ ಅಂಗಡಿಯಲ್ಲಿ ಅಕ್ಕಿ ಪಡೆಯಲು ಸಾಲಿನಲ್ಲಿ ನಿಲ್ಲುವಂತೆ, ಒಂದೊಂದೇ ಹಕ್ಕಿಮರಿಯು ಗೂಡಿನ ಬಾಗಿಲಲ್ಲಿ ಸರತಿಸಾಲು ನಿಲ್ಲುತ್ತವೆ. ಪೋಷಕಹಕ್ಕಿಗಳಿಂದ ತಿಂಡಿ ತಿಂದ ಮರಿ, ತನ್ನ ಹಿಂದಿನ ಮರಿಗೆ ಜಾಗಕೊಟ್ಟು, ಸರತಿಯ ಕೊನೆಯಲ್ಲಿ ಬಂದು ನಿಲ್ಲುತ್ತದೆ. ಈ ಸರತಿಯ ಚಕ್ರ ಹೀಗೆ ಮುಂದುವರಿಯುತ್ತದೆ... ಒಂದು ತಿಂಗಳವರಿಗೂ!.

ಸಗಣಿತಪ್ಪೆಯಲ್ಲಿರುವ ಹುಳುಗಳನ್ನು ಕೆದಕಿ ಹಿಡಿದು, ನೆಲದಾಳದಲ್ಲಿ ಅಡಗಿ ಕುಳಿತಿರುವ ಲಾರ್ವಗಳನ್ನು ತನ್ನ ಚೂಪಾದ ಕೊಕ್ಕಿನಿಂದ ಕುಕ್ಕಿ ಹಿಡಿದರೆ, ಮತ್ತೆ ಕೆಲವು ಬಾರಿ ಹುಲ್ಲಿನಲ್ಲಿ ಜಿಗಿಯುವ ಸಕಲ ಮಿಡತೆಗಳನ್ನ ಹಾಗು ಜೇಡಗಳನ್ನೂ ಸಹ ತನ್ನ ಮಕ್ಕಳ ತಿಂಡಿ ಮೆನುಗೆ ಸೇರಿಸಿ ಮಕ್ಕಳನ್ನು ಸಾಕುತ್ತವೆ.

ಏನೇ ಹಾಗಲಿ,
ಅರ್ಧ ಚಂದ್ರನಂತೆ ಹರಳಿದ  ತಲೆಯ ಮೇಲಿನ ಜುಟ್ಟಿನ ಪುಕ್ಕದ ತು
ದಿಯ ಕಪ್ಪುಭಾಗವು,
ಫಿಬನೋಚಿಯ ಗೋಲ್ಡನ್ ಸ್ಪೈರಲ್ ನೆನಪಿಸಿದರೆ ತಪ್ಪಿಲ್ಲಾ!








# ಹುಲಿಗಳ ಹಾದಿಯ ಸೋಲಿಗ



ಬಿಳಿಗಿರಿರಂಗ ರಕ್ಷಿತಾರಣ್ಯವು ಹುಲಿ ಸಂರಕ್ಷಿತಾರಣ್ಯವೆಂದು ಘೋಷಿತವಾದಾಗ ಕೆಲವರಿಗೆ ಸಮಸ್ಯೆಗಳು ಹೆಚ್ಚೇ, ಅನಗತ್ಯವಾದ ಮಾತು-ಟೀಕೆಗಳ ಗುರಿಯೋ ಸರಿ. ಆದರೆ ಬಿಳಿಗಿರಿರಂಗ ರಕ್ಷಿತಾರಣ್ಯದಲ್ಲಿ ಸುಮಾರು ವರ್ಷಗಳಿಂದ ಜೀವನ ನಡೆಸಿಕೊಂಡು ಬಂದಿರುವ ಸೋಲಿಗರ ಬಗ್ಗೆ ನೋಡಿದಾಗ, ಅವರ ವನ್ಯಸಂಸ್ಕೃತಿ ಅಥವಾ ವನ್ಯ ಸಂಪ್ರದಾಯಗಳಂತಹ ಜೀವನಶೈಲಿಯನ್ನು ಒಳಗೊಂಡಿರುವ ಅನೇಕ ಸೋಲಿಗ ಕುಟುಂಬಗಳು ಇವೆ. ಅವು ಬಡ ಕುಟುಂಬಗಳು ಎಂಬುದು ಎಲ್ಲಾರಿಗೂ ಗೊತ್ತಿರುವ ಸಂಗತಿಯೋ ಸರಿ, ಆದರೆ ಅರಣ್ಯ ಜೀವನದಲ್ಲಿ ಜೀವನವನ್ನು ಉತ್ತಮ ಪಡಿಸಿಕೊಳ್ಳುವುದು ಕಷ್ಟಸಾಧ್ಯವೂ ಹೌದು. ಅರಣ್ಯಗಳಲ್ಲಿ ಬುಡಕಟ್ಟು ಜನಾಂಗಗಳು ತಮ್ಮ ಜೀವನ ನಡೆಸಲು ಅರಣ್ಯ ಉತ್ಪನ್ನಗಳನ್ನೇ ಬಳಸಿಕೊಳ್ಳಬೇಕು, ಬೇರೆ ವಿಧಿಯಿಲ್ಲ. ಅದು ಪರೋಕ್ಷವಾಗಿ ಹುಲಿ ಸಾಮ್ರಾಜ್ಯದ ಮೇಲೆ ಪ್ರಭಾವ ಬಿರುವುದರಲ್ಲಿ ಮೊತ್ತೊಂದು ಮಾತಿಲ್ಲ!. ಇಲ್ಲಿ ಹುಲಿಗಳ ಅಗತ್ಯ ಮತ್ತು ಅಭಯಾರಣ್ಯದಲ್ಲಿ ವಾಸವಿರುವ ಜನಗಳ ಹಕ್ಕುಗಳು, ಈ ಎರಡರ ನಡುವೆ ಸಮನ್ವಯವನ್ನು ಸಾಧಿಸುವುದಾದರೂ ಹೇಗೆ? ಎಂಬ ಪ್ರಶ್ನೆ ಬಂದಾಗ, ಅಂದರೆ ಸೋಲಿಗರ ಹಿತರಕ್ಷಣೆಯೋ? ಹುಲಿ ಸಂರಕ್ಷಣೆಯೋ? ಎಂಬುದು ಸರಿಯಾದ್ದುದು.

ನನ್ನ ಪ್ರಕಾರ ಇಲ್ಲಿ ಸೋಲಿಗರ ಪ್ರಶ್ನೆ ಮುಖ್ಯವಲ್ಲ. ಮನುಷ್ಯ ವಿಕಾಸವಾಗುವುದಕ್ಕೂ ಮೊದಲೇ ಎಷ್ಟೋ ಲಕ್ಷಾಂತರ ವರ್ಷಗಳ ಹಿಂದೆಯೇ ಅನೇಕ ಜೀವಿ ಸಂಕುಲಗಳು ಭೂಮಿಯ ಮೇಲೆ ಸೃಷ್ಟಿಯಾಗಿವೆ. ಆದಿಮಾನವರು ಪ್ರಕೃತಿಯೊಂದಿಗೆ ಸಹಬಾಳ್ವೆ ಮಾಡಲು ಕಲಿತಿದ್ದರಿಂದಾಗಿ ಯಾವ ಜೀವಿಗಳೂ ನಿರ್ನಾಮವಾಗಲಿಲ್ಲ, ಮನುಷ್ಯ ಭೂಮಿಯ ಮೇಲೆ ನಾಗರೀಕತೆ ವಿಶ್ವವ್ಯಾಪಿಯಾಗುತ್ತ ಬಂದಾಗ ನಿಸರ್ಗದ ಸಂಪನ್ಮೂಲಗಳ ಬಳಕೆಯ ಪ್ರಮಾಣ ಹೆಚ್ಚುತ್ತಾ ಬಂದಹಾಗೆಲ್ಲ, ಕಾಡು ಪ್ರಾಣಿಗಳ ಮೇಲೆ ವ್ಯತಿರಿಕ್ತವಾಗಿ ಪರಿಣಾಮವಾಗತೊಡಗಿರುವುದರಲ್ಲಿ ಸತ್ಯಸತ್ಯಾಂಶಗಳು ಅಡಕವಾಗಿವೆ. ಉದಾಹರಣೆಗೆ ಮುಖ್ಯವಾಗಿ ವ್ಯವಸಾಯದ ಭೂ ವಿಸ್ತರಣೆ, ಅರಣ್ಯದಲ್ಲಿ ಗಣಿಗಾರಿಕೆ, ವನ್ಯ ಜೀವಿಗಳ ಆವಾಸ ಧ್ವಂಸ, ಕಳ್ಳಬೇಟೆ, ಅರಣ್ಯ ಉತ್ಪನ್ನಗಳ ಶೇಕರಣೆ, ನೀರು, ಭೂಮಿ ಹಾಗೂ ವಾಯುಮಾಲಿನ್ಯ, ಮಾನವನ ಜನಸಂಖ್ಯ ಸ್ಫೋಟವಲ್ಲ, ಜನಸಂಖ್ಯಾ ಮಹಾಸ್ಫೋಟ. ಇವೆಲ್ಲವೂ ಇತ್ತೀಚಿನ ವರ್ಷಗಳಲ್ಲಿ ವನ್ಯ ಪ್ರಾಣಿಗಳ ನಿರ್ವಂಶಕ್ಕೆ ಕಾರಣವಾಗುತ್ತಿವೆ



ನಾವು ಇಲ್ಲಿ ಮುಖ್ಯವಾಗಿ ತಿಳಿದು ಕೊಳ್ಳಬೇಕಾಗಿರುವುದು ಸೋಲಿಗರು ಎಂಬುದು ಮುಖ್ಯ ಪ್ರಶ್ನೆಯಲ್ಲ, ಮನುಷ್ಯ ಎಂಬುದು ಮುಖ್ಯಸಂಗತಿ! ಸೋಲಿಗರು ಮುಗ್ಧಜೀವಿಗಳೇ ಸರಿ, ಆದರೆ ಹುಲಿ ಮತ್ತು ಮನುಷ್ಯನ ಪ್ರಶ್ನೆ ಬಂದಾಗ, ಹುಲಿಯ ಸಂರಕ್ಷಣೆಯ ಬಗ್ಗೆ ಹೆಚ್ಚು ಒತ್ತುಕೊಡಬೇಕಾದದ್ದು ಮನುಷ್ಯನ ಧರ್ಮ. ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಕಿಅಂಶ, ಇಪ್ಪತ್ತನೇ ಶತಮಾನದ ಭಾರತ-ಉಪಖಂಡದಲ್ಲಿ ಸುಮಾರು 40,000 ಹುಲಿಗಳು, ಈಗ ಕೇವಲ 1411 ಹುಲಿಗಳು!

ಕರ್ನಾಟಕದಲ್ಲಿ 1966 ರ ಹುಲಿಗಣತಿ ಪ್ರಕಾರ 114 ಹುಲಿಗಳಿದ್ದು, 1969 ರಲ್ಲಿ 100 ಹುಲಿಗಳು, 1970 ರಲ್ಲಿ 70 ಹುಲಿಗಳು, 1972 ರಲ್ಲಿ 102 ಹುಲಿಗಳು, ಇನ್ನೂ ಉಳಿದ ನಾಲ್ಕು ದಶಕಗಳಲ್ಲಿ ಹುಲಿಯು ಸ್ಥಿತಿಯುನ್ನು ಒಮ್ಮೆ ಊಹಿಸಿಕೊಳ್ಳಿ. ..! ಮತ್ತೆ ಇದೇ ಸಾಲಿನ ಜನಸಂಖ್ಯೆಯುನ್ನು ಮತ್ತು ಅವನ ಬಳಕೆಯುಲ್ಲಿರುವ ಸಂರಕ್ಷಿತಾರಣ್ಯವನ್ನು ಒರತುಪಡಿಸಿದ ಭೂ ಪ್ರದೇಶವನ್ನು ಗಮನಿಸಿದರೇ. . .! ಇದು ಬಹಳ ಕಳವಳಕಾರಕ ಅಂಶವೇ ಸರಿ. ಒಮ್ಮೇ ಗಮನಿಸಿ ಕರ್ನಾಟಕದಲ್ಲಿರುವ ಐದುಕೋಟಿ ಮೀರಿದ ಜನಸಂಖ್ಯೆಯಲ್ಲಿ. . . ! ಸುಮಾರು 133 ಹುಲಿಗಳಿಲ್ಲಿ. . . !

ಮತ್ತೆ ಸೋಲಿಗರ ಹಿತರಕ್ಷಣೆಯೋ ? ಹುಲಿಗಳ ಸಂರಕ್ಷಣೆಯೋ ? ಎಂಬ ಪ್ರಶ್ನೆ ಬಂದಾಗ, ಸೋಲಿಗರು ಕರ್ನಾಟಕದ ಅರಣ್ಯ ಪ್ರದೇಶಗಳಲ್ಲಿ 299 08 ಸಂಖ್ಯೆಯುಲ್ಲಿ ವಾಸವಾಗಿದ್ದು. ಇದೇ ಅರಣ್ಯ ಪ್ರದೇಶಗಳಲ್ಲಿ ಹುಲಿಗಳು ಕೇವಲ ಸುಮಾರು 133 ಸಂಖ್ಯೆಯುಲ್ಲಿ ವಾಸಿಸುತ್ತಿವೆ. ಮಾನವನ ಚಟುವಟಿಕೆಗಳ ಮಾರಕ ಪರಿಣಾಮಗಳಿಂದ ಸುತ್ತುವರೆಯುಲ್ಪಟ್ಟಿರುವ ಹುಲಿಗಳು, ಅವುಗಳ ಹಿಂದಿನ ಅರಣ್ಯ ಪ್ರದೇಶಗಳ ವ್ಯಾಪ್ತಿಯು ಕೇವಲ ಐದು ಭಾಗಕ್ಕಿಂತಲೂ ಕಡಿಮೆ ಪ್ರದೇಶದಲ್ಲಿ ಈಗ ಉಳಿಯುುವ ಅಂತಿಮ ಪ್ರಯುತ್ನದಲ್ಲಿವೆ





ಎಂಬುದು ಸೋಲಿಗ ಎಂಬ 'ಹಸಿದ ಹೊಟ್ಟೆ'ಗಳಿಗೆ ಹುಲಿ ಸಂರಕ್ಷಣೆಯು ಬಗ್ಗೆ ಕಾಳಜಿ, ಕನಿಕರ ಎಲ್ಲಿಂದ ಬರಬೇಕು?


ಸೋಲಿಗರು ಪರಂಪರಾನುಗತವಾಗಿ ಬಿಳಿಗಿರಿರಂಗನ ಬೆಟ್ಟದ ಸುತ್ತಮುತ್ತಲಿನ ಅರಣ್ಯಗಳಲ್ಲಿ ವಾಸಿಸುತ್ತಿರುವ ಈ ಜನಾಂಗಗಳು ಅರಣ್ಯದ ಉತ್ಪನ್ನಗಳನ್ನು ನೇರವಾಗಿ ಬಳಸಿಕೊಳ್ಳುತ್ತಿಲ್ಲ ಎಂಬ ಸಂಗತಿಗಳೇ ಹೆಚ್ಚು. ಇಂತಹ ಸಂದರ್ಭಗಳಲ್ಲಿ ಅರಣ್ಯದಲ್ಲಿ ದೊರೆಯುುವ ಜೇನು, ಹಣ್ಣು, ಕಾಯಿ ಮುಂತಾದವುಗಳನ್ನು ಸಂಗ್ರಹಿಸಿ ಮಾರಿ ಜೀವನ ನಡೆಸುತ್ತಿದ್ದಾರೆ ಎಂಬುದು ಸತ್ಯ. ಮತ್ತೆ ಅವರುಗಳು ಹೊಲ, ತೋಟಗಳಲ್ಲಿ ರಾಗಿ, ಕಾಫಿ, ಬಾಳೆ ಮುಂತಾದ ಕೃಷಿ ಬೆಳೆಗಳನ್ನು ತೆಗೆಯುುತ್ತಾರೆ ಎಂಬುದು ಎಷ್ಟು ಸೂಕ್ತವೋ.

ಸರ್ಕಾರ ಮತ್ತು ಸರಕಾರೇತರ ಸಂಸ್ಥೆಗಳು ಇವರ ಜೀವನವನ್ನು ಉತ್ತಮ ಪಡಿಸುವಲ್ಲಿ ಸಕ್ರಿಯುವಾಗಿ ಪ್ರಯುತ್ನಗಳನ್ನು ಮಾಡುತ್ತಿವೆ ಎಂಬುದರಲ್ಲಿ ಸತ್ಯ ಸಂಗತಿಯಿದೆ. ನಾವು ಗಮನಿಸಿದ್ದೇವೆ, ಉದಾಹರಣೆಗೆ ಗಿರಿಜನರ ಅಭಿವೃದ್ಧಿಯುಲ್ಲಿ ಡಾ।। ಎಚ್.ಸುದರ್ಶನ್‌ರವರ "ವಿವೇಕಾನಂದ ಗಿರಿಜನ ಕಲ್ಯಾಣ ಕೇಂದ್ರ"ವು ಸುಮಾರು ಮೂವತ್ತು ವರ್ಷಗಳಿಗೂ ಹೆಚ್ಚಾಗಿ ಕೆಲಸಗಳನ್ನು ಮಾಡತ್ತಿದ್ದೆ. ಆರೋಗ್ಯ ಶುಶ್ರೂಷೆ, ಶಿಕ್ಷಣ, ಮತ್ತು ಉದ್ಯೋಗ ತರಬೇತಿಗಳ ಕಾರ್ಯಕ್ರಮಗಳಡಿಯುಲ್ಲಿ ಗಿರಿಜನರ ಹಿತವನ್ನು ಕಾಯ್ದುಕೊಳ್ಳಲು, ಸೋಲಿಗರ ಅಭಿವೃದ್ಧಿಗೆ ಕಾರಣವಾಗಿ ಸುದರ್ಶನ್‌ರವರು ಬುಡಕಟ್ಟು ಜನಾಂಗಗಳಿಗೆ ನಾಗರೀಕತೆಗೆ ಬೇಕಾಗುವ ಎಲ್ಲಾ ಕಾರ್ಯಗಳನ್ನು ಕಲಿಸುತ್ತಾ ಬಂದಿದ್ದಾರೆ. ಕಾಡನಲ್ಲಿಯೇ ವನ್ಯ ಜೀವನವನ್ನೇ ನಡೆಸುತ್ತ ಬಡತನದಲ್ಲಿಯೇ ಬದುಕಬೇಕೆಂಬ ಆಸೆ ಆಕಾಂಕ್ಷೆಗಳು ಅವರಿಗಿಲ್ಲ. ಎಂದ ಮೇಲೆ, ಸರ್ಕಾರವು ಅರಣ್ಯದಿಂದ ಹೊರ ಬರುವ ಕುಟುಂಬಗಳಿಗೆ ಸಾಕಷ್ಟು ಪರಿಹಾರವನ್ನು ಕೊಡಲೂ, ಸಹ ಅರಣ್ಯ ಹಕ್ಕು ಕಾಯ್ದೆಯುಲ್ಲಿ ಅವಕಾಶ ಒದಗಿಸಿದೆ. ವಾಸಕ್ಕೆ ಮನೆ, ಕೃಷಿಭೂಮಿ, ಮತ್ತು ಧನ ಪರಿಹಾರವೂ ಇದೆ. ಪ್ರತಿ ಕುಟುಂಬಕ್ಕೆ ಹತ್ತು ಲಕ್ಷ ಪರಿಹಾರವೂ ಸಹ! ಇದೇ ರೀತಿ ಕಾಡಿನಿಂದ ಹೊರಬಂದಿರುವ ಕುಟುಂಬಗಳಿಗೆ ನಾಗರಹೊಳೆ ಮತ್ತು ಭದ್ರಹುಲಿ ಸಂರಕ್ಷಿತ ಪ್ರದೇಶಗಳ ಉದಾಹರಣೆಗಳಿವೆ.




ಇಷ್ಟೆಲ್ಲ ಸೌಲಭ್ಯವಿರುವ ಬುಡಕಟ್ಟು ಜನಾಂಗಗಳಿಗೆ ಉತ್ತಮ ಆರೋಗ್ಯ, ಶಿಕ್ಷಣ, ಕೃಷಿ ಮತ್ತು ನೀರಾವರಿ ಮುಂತಾದ ಅನುಕೂಲಗಳಿಂದಾಗಿ ಉತ್ತಮ ಜೀವನವನ್ನು ನಡೆಸಬಹುದವಲ್ಲವೇ? ಇಷ್ಟೆಲ್ಲ ಇರುವ ಇವರಿಗೆ, ಸೋಲಿಗ ಜನಾಂಗ ಮತ್ತು ಅರಣ್ಯ ಪ್ರದೇಶವು ಪರಸ್ಪರ ಅವಲಂಬಿತವಾಗಿದೆ ಎಂಬ ಅಭಿಪ್ರಾಯದ ಕುರಿತು ಪರ-ವಿರೋಧಗಳನ್ನು ಸೃಷ್ಠಿಸಿ, ಅನ್ಯರು ಲಾಭ ಪಡೆಯುವ ಜನ ಬಹಳವಿದ್ದಾರೆ. ಬುಡಕಟ್ಟು ಜನಾಂಗಗಳು ಸ್ವಲ್ಪವೇ ಉಳಿದಿವೆ. . . ಅವರ ಹಿತರಕ್ಷಣೆ ಬೇಕು. . . ಸೋಲಿಗ ಸಮುದಾಯವನ್ನು ಅರಣ್ಯಗಳಿಂದ ಉಚ್ಚಾಟಿತಗೊಳಿಸುತ್ತಾರೆ. . . . ವನ್ಯ ಸಂಪ್ರದಾಯವನ್ನು ಆಳುವಮಾಡುತ್ತಿದ್ದಾರೆ. . . . ಎಂಬ ಹಲವಾರು ಕಾರಣಗಳಿಂದ ಗಿರಿಜನರ ಹಾದಿಯುನ್ನು ತಪ್ಪಿಸುತ್ತಿರುವ ಅನ್ಯರ ಹಸ್ತಕ್ಷೇಪದಿಂದಾಗಿಯೇ. .! ಸೋಲಿಗರ ಹಿತರಕ್ಷಣೆಗೆ ಅಥವಾ ಬುಡಕಟ್ಟು ಜನಾಂಗಗಳ ಉದ್ದಾರದ ಹಾದಿಗೆ ಕಲ್ಲುಹಾಕುತ್ತಿದ್ದಾರೆ. ಸೋಲಿಗರ ಹಿತರಕ್ಷಣೆಗೆ ಟೊಂಕಕಟ್ಟಿ ನಿಂತಿರುವ ಈ ಜನಸಮುದಾಯವು ಹುಲಿಗಳ ಉದ್ದಾರಕ್ಕೆ, ಅಥವಾ ಹುಲಿಗಳ ವಾಸಕ್ಷೇತ್ರಗಳ ಉಳಿವಿಗೆ ಏಕೆ ಮುಂದೆ ಬರುತ್ತಿಲ್ಲ. ?





# ಕಾಡೆಮ್ಮೆ ಬೇಟೆ



ಗುಂಗುರು ತಲೆಯು, ದಪ್ಪ ತುಟಿಯು, ಬಡಕಲು ದೇಹದ ನರರು. ನೋಡಲು ಸ್ವಲ್ಪ ಪೂರ್ವದಲ್ಲಿ ಆಫ್ರಿಕಾ ಖಂಡದಿಂದ ಭರತ ಖಂಡಕ್ಕೆ ವಲಸೆ ಬಂದ ನನ್ನ ಪೂರ್ವಜರ ಹಾಗೆ ಕಾಣುತ್ತಾರೆ. ಜೀವನ ಶೈಲಿ ಇನ್ನೂ ನಾಗರೀಕತೆಗೆ ಒಗ್ಗಿಲ್ಲಾ. ಸುತ್ತ ಮುತ್ತಾ 14 ಹಳ್ಳಿಯ ಜನ ಪಾರೆಸ್ಟ್ರುಗಳಿಗೆ ಹೆದರಿ ಬೇಟೆಯನ್ನೇ ನಿಲ್ಲಿಸಿ ಹಲವು ದಶಕಗಳೇ ಕಳೆದಿದ್ದರೂ, ಇವರು ಮಾತ್ರಾ ಚಾಟರ ಬಿಲ್ಲು, ಕಾಡಲ್ಲೆಲ್ಲಾ ತಂತಿಹುರುಳು, ಕಾಡುಕೋಳಿಗೆ ಕಲ್ಲುಹುರುಳು, ಇಲಿಬೇಟೆ, ಉಡಬೇಟೆ, ಹೀಗೆ ಹಲವು ಶಬ್ಧರಹಿತ, ಸಾಕ್ಷಿ–ಕುರುಹುರಹಿತವಾಗಿ ಬೇಟೆಯಾಡುವ ಕಲೆಯುನ್ನ ಕರಗತ ಮಾಡಿಕೊಂಡು, ಕಾಡು ಸೋಸುವ ಕಾರ್ಯ ನಿರಾಳವಾಗಿ ನೆಡೆಸುತ್ತಿದ್ದಾರೆ.

ಆನೆವ್ರೋರ್ ತೋಟದ್ ಮೇಸ್ತ್ರಿ ಮೂಲೆಮುತ್ತಾ ಅವನಲ್ಲಾ. . . ಅವರ್ ಹೆಂಗಸರ್ ತಂಗಿನ ಕೊಟ್ಟಿರೋ ಸೊಳ್ಳೆಪುರದ ಭೂಪ ಮಾದೇವ. ವೊನ್ನೆ ಬೇಸಿಗೆನಲ್ಲಿ ಮಟಮಟ ಮಧ್ಯಾನ್ಹ ಆ ಅರ್ಜುನನ್ಕುಂಟೆ ತಾವ ನೀರ್ಕುಡಿಯಾಕೆ ಬರೋ ಕಡವೆ ಹೊಡೆಯಾಕೆ ವಂಚಾಕ್ಕೋಂಡು, ತನ್ನ ನಾಲ್ಕು ಇಂಚು ಲೋಡ್ ಮಾಡಿರೋ ಕಳ್ಳಗನ್ನು ಹಿಡಿಕೊಂಡ್ ಕಾದಿದ್ದ.

ಕಾಡಿನ ಕಡೆಯ ಲಂಟಾನ ಜಿಡ್ಡಿನಿಂದ ಯಾವುದೋ ಪ್ರಾಣಿ ಸರಸರ ತರಗೆಲೆ ಸದ್ದು ಮಡಿಕೊಂಡು ಬರುತ್ತಾ ಇತ್ತು. ಇವನು ಗನ್ನನ್ನು ಹೆಗಲಿಗೇರಿಸಿ, ಪೊದೆಯ ಕಡೆ ತದೇಕಚಿತ್ತವಾಗಿ ಕಾಯುತ್ತಾ ಕುಳಿತ. ಬೇಟೆಯಲ್ಲಿ ಬಹಳವಾಗಿ ಪಳಗಿದ್ದ ಇವನು ಅದು ಕಡವೆ ಅಥವಾ ನಾಗರಹೊಳೆಯಿಂದಾ ಇತ್ತೀಚೆಗೆ ಇತ್ತ ಕಡೆ ಬಂದಿರುವ ಕಾಡಮ್ಮೆ ಇರಬೇಕು ಎಂದು ಯೋಚಿಸತೊಡಗಿದ. ವೊನ್ನೆ ತಾನೆ ತಟ್ಟಗುಪ್ಪೆತಾವ ಹೊಲಕ್ಕೆ ಆನೆ ಬರದೇ ಇರಲಿ ಎಂದು ಬೇಲಿ ತಂತಿಗೆ ಕೊಟ್ಟಿದ್ದ ಕರೆಂಟ್ಗೆ ಕಾಡೆಮ್ಮೆ ಬಿದ್ದೋಗಿದ್ದೂ, ಆ ಊರಿನ ಸಕಲ ಕಿಲಸ್ತರು ಹೊಲದಲ್ಲಿ ಸತ್ತು ಬಿದ್ದಿದ್ದ ಕಾಡೆಮ್ಮೆಯನ್ನ ಹುರಿದು ತಿಂದು ಹಬ್ಬಮಾಡಿದ್ದೂ, ಪಿಲಿಪ್ಸ್ವಾಮಿಯಿಂದ ಕೇಳಿ ತಿಳಿದಿದ್ದ. ಕಾಡೆಮ್ಮೆಯನ್ನು ನೆನೆದು ಬಾಯಲ್ಲಿ ನೀರೂರಿದ್ದರಿಂದ, ಪೊದರಿನಿಂದ ತಲೆ ಕಾಣಿಸಿದ್ದೇ ತಡ ಇಕ್ಕಡಿಸಿ ಬಿಟ್ಟ!.

ಹೋಗಿ ನೋಡುತ್ತಾನೇ. . . ಮೈಯೆಲ್ಲಾ ತಣ್ಣಗಾಗಿ ಹೋಯ್ತು ಅದನ್ನು ನೋಡಿ! ಕೊರಮರದೊಡ್ಡಿಯ ಕಾಡುದನ!. "ಕೆಟ್ಟೋಯ್ತುಲ್ಲಾ ಕೆಲಸ ಏನು ಮಾಡೋದು?" ಎಂದು. ಸರಸರ ಅಂತಾ ಮನೆಗ್ಬಂದು, ಬೆಟ್ಕುಡ್ಲು, ಚೂರಿ, ಮಚ್ಚು ಎಲ್ಲಾ ತಗೊಂಡೋಗಿ ಗುಂಡು ತಗುಲಿದ ಜಾಗನೆಲ್ಲಾ ಕೊಯ್ದು ಗುಂಡು ತಕ್ಕೊಂಡು ಮನೆಗ್ ಬಂದೋನು ತೆಪ್ಪಗಾಗಿಬಿಟ್ಟ!.

ಹಸುಪಡ್ಡೆ ರಾತ್ರಿಯೆಲ್ಲಾ ಮನೆಗೆ ಬರಲಿಲ್ಲಾ ಯ್ಯಾಕೆ? ಎಂದು ಕುಳ್ಳೀರನೋರ್ ಅಮ್ಮ ಊರೆಲ್ಲಾ ಹುಡುಕುತಾ. . . ಇರಬೇಕಾದರೆ, ನೇರ ಬಂದು ಇವನನ್ನೇ ಕೇಳಿದಳಂತೆ!.

'ಏನೋ ಮಾದೇವಣ್ಣಾ,

ನಮ್ ಅಸುಪಡ್ಡೇ ಏನಾರಾ ನೋಡ್ದಾ? ರಾತ್ರಿಯೆಲ್ಲಾ ಮನೇಕೇ ಬಂದಿಲ್ಲಪ್ಪೋ'

ಇವನ ಎದೆ ದಸಕ್ ಅಂತು!.

‘ಯ್ಯಾವುದು? ಅದೇ ಬೂದಗಿತ್ತಲ್ಲಾ. . . ಕಡಸು. . ಅದಾ?’ ಎಂದ ಆಕಾಶ ನೋಡಿಕೊಂಡು.

“ಆ ಅರ್ಜುನನ್ ಕುಂಟೆತಾವ... ಮಟ್ಟಾಗ ಹಿಡಿದ್ಬುಟದೇ ಈರೀ”. ‘ನಿನಗೆ ಏಳಾನಾ ಅಂತಾನೇ ಇದ್ದೇ.. . . ನೆನ್ನೆ ಅಂಗೇ ಹಂಗ್ ಹೋಗಿದ್ದೇ ನೋಡ್ದೆ’ ಎಂದು ತಡವರಿಸಿ ಹೇಳಿದ.

ಈರಿ ತನ್ನ ಮಗ ಕುಳ್ಳೀರನ ಜೊತೆ ಅರ್ಜುನನ್ಕುಂಟೆತಾಕ್ ಹೋಗಿ ನೋಡಿ, ಮಾದೇವ ಮಾಡಿರೊ ಹಲ್ಕ ಕೆಲಸ ಎಲ್ಲಾ ಗೊತ್ತಾಗಿ, ಇನ್ನೂ. . . ಪೋಲೀಸ್‌ನೋರ್ಗೆ ಕಂಪ್ಲೆಂಟ್ ಕೊಟ್ರೆ. . . ಮೊದಲೇ ಕಳ್ಳಗನ್ನು! ಇನ್ನೇಲ್ಲಿ ಐರಾಣಾವಾತದೋ ಎಂದು ಹೆದರಿ, ದೊಡ್ಡಮನೇ ಗೌಡ್ರತ್ರ ನ್ಯಾಯಕ್ಕಾಕೀ. . , ದೊಡ್ಡೇಗೌಡರಿಗೂ ಹಾಗಾಗ ಚೂರು ಪಾರು ಕಾಡುಬಾಡು ಸಪ್ಲೆ ಕೊಡುತ್ತಿದ್ದುದ್ದರಿಂದ ಮಾದೇವನ ಕಡೆಗೇ ಆಯ್ತು ನ್ಯಾಯ.



“ ಇರ್ಲಿ ಬಿಡ್ರೋ, ಏನೊ ಗಾಚಾರಾ ಸರಿಯಿಲ್ಲಾ. ಯಡವಟ್ಟಾಗೊಗದೆ” ಎಂದೂ. . . ಇದು ಊರಿನ ವಿಷಯ ಎಂದೂ. . ಮನೆ ಮನೆಗೂ ನೂರ್ ನೂರ್ ರುಪಾಯಿ ದಂಡ ಹಾಕಿ, ಗೌಡ್ರೂ ಐನೂರ್ ಸೇರ್ಸಿ ಐದ್ಸಾವರ ಕೊಟ್ಟರಂತೆ ಈರಿಗೆ.

ಹಣ ತೆಗೆದುಕೊಂಡ ಈರಿ,

“ದನ ಹೋದ್ರೆ ಚಿಂತೆಯಿಲ್ಲ ಗೌಡ್ರೇ, ಈ ನನ್ಮಗನಿಗೆ ಕಣ್ಣಿಲ್ವಾ? ಮಿಕ ಯಾವುದು? ದನ ಯಾವುದು? ಎಂದು ಗೊತ್ತಗದ್ದಿದ್ದರೆ ಇವನೆಂತಾ ಶಿಕಾರಿಗಾರ ನೀವೇ ಹೇಳ್ರಿ. ಕಾಡಾಗ ಮನ್ಸಾ ಬಂದ್ರು ಹೊಡೆದು ಹುರುಳಿಸಿಬಿಡತಾನೇ ನೋಡ್ತಾಯಿರ್ರಿ ಇವನು.” ಎಂದು ತನ್ನ ದುಖಃವನ್ನು ತೋಡಿಕೊಂಡರೂ,ಸ್ ಗೌರೆನಳ್ಳಿ ಬುಲಟ್ ಸಾಬೀ ಇದೇ ಹಸುಗೇ ‘ಮೂರು ಸಾವಿರದ ವ್ಯಾಲೆ ಒಂದ್ ದಮ್ಡಿ ಹೆಚ್ಗೆ ಕೊಡಲ್ಲಾ’ ಎಂದು ಹೇಳಿ ಹೋಗಿದ್ದನಾದ್ದರಿಂದ ಅಷ್ಟೇನೂ ಬೇಸರ ಹಾಗಲಿಲ್ಲ ಈರಿಗೆ.

# ನಾನೊಂದು ಕನಸ ಕಂಡೆ

ಮುಂಜಾನೆಯ ಮಬ್ಬಿನಲಿ ನನೊಂದು
ಕನಸ ಕಂಡೆ.

ಅಂದು ಅಡವಿಯಲಿ
ಮರಗಳೆಲ್ಲ ಮೈತುಂಬಿ
ಮುಗಿಲತ್ತ ನೋಡುವುದ ಕಂಡೆ.

ಪ್ರಾಣಿಪಕ್ಷಿಗಳೆಲ್ಲ
ವಿರೋಧವ ಮರೆತು
ವಿನೋದದಿ ಆಡುವುದ ಕಂಡೆ.

ಅಲ್ಲೊಂದು ಕಾಡುಬಳ್ಳಿಯು
ತುಂಬ ಹೂ ತುಂಬಿ
ವನಸಿರಿಗೆಲ್ಲಾ ಗಂಧಗಾಳಿಯ ಲೇಪಿಸುವುದ ಕಂಡೆ.

ಆ ಹೊನ್ನಿರಿನ ಕೊಳದಲ್ಲಿ
ನಸುನಗುತ ನಿಂತಿರುವ
ಹೊನ್ನ ಕೆಂದಾವರೆಯ ಕಂಡೆ

ವನ ದೇವತೆಯು
ಸಂತೋಷದಿಂದ ತನ್ನ ಮಕ್ಕಳ
ಅಪ್ಪಿ ಮುದ್ದಿಸುವ ರಮ್ಯ ನೋಟವ ಕಂಡೆ !

– ಲಕ್ಷ್ಮೀಕಾಂತ್.ಎಸ್.ಬಿ